Regd No BG 155 27-8-1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಕಾಂಗ್ರೆಸ್ ಅಧ್ಯಕ್ಷರಾಗಿ ನಿಜಲಿಂಗಪ್ಪನವರ ಮುಂದುವರಿಕೆ

ಜೈದಿಗಳ ಕೈಗಾರಿಕೆ

ಬೀದರ್— ಇಲ್ಲಿಯ ಜಿಲ್ಲಾ ಜೈಲಿನಲ್ಲಿಯ ಖೈದಿಗಳು ಸಾಬೂನು ತಯಾರಿಸುತ್ತಿರುವರೆಂದು ವರದಿಯಾಗಿದೆ.

ಬಸ್ ಅಕ್ಸಿಡೆಂಟ್

ಮಂಗಳೂರು— 80 ಪ್ರಯಾಣೀಕರಿದ್ದ ಒಂದು ಬಸ್ಸು ಸಿರಿಯಾ ಸೇತುವೆ ಹತ್ತಿರ 40 ಅಡಿ ಕೆಳಗೆ ಬಿದ್ದು 40 ಮಂದಿ ಗಾಯಗೊಂಡರು

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀನುನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ. ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ:

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ; ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವಂದು ತತ್ಕಾಲ್ಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಜಪುರಂ, ಮೈಸೂರು 4.

ಕಾಂಗ್ರೆಸ್ ಅಧ್ಯಕ್ಷರು

ನವದೆಹಲಿ— ಶ್ರೀ ನಿಜಲಿಂಗಪ್ಪನವರೇ 1971 ಜನವರಿವರೆಗೆ ಕಾಂಗ್ರೆಸ್ ಅಧ್ಯಕ್ಷರಾಗಿರುವರೆಂದು ಶ್ರೀ ಕಾಮರಾಜರು ಹೇಳಿನರು.

★

ಪೆರ್ಷ ಹೆಚ್ಚಿಸಲಾಯಿತು

ನವದೆಹಲಿ— ರೂ 200 ವರೆಗೆ ಪೆರ್ಷ ಪಡೆಯುತ್ತಿರುವವರಿಗೆ ರೂ. 10 ಸೆಪ್ಟಂಬರು 1 ರಿಂದ ಹೆಚ್ಚಿಸಲಾಗುವುದೆಂದು ಲೋಕಸಭೆಯಲ್ಲಿ ತಿಳಿಸಲಾಯಿತು – ಇದಕ್ಕೆ ಮುಂಚೆ ಪ್ರಧಾನಿಯವರಿಗೆ 9882 ಪೆರ್ಷದಾರರ ರುಜುವಿನ ಅರ್ಜಿ ಕೊಡಲಾಯಿತು

★

ಕೇಂದ್ರದ ಉತ್ಪತ್ತಿಯಲ್ಲಿ

ನವದೆಹಲಿ— ಕೇಂದ್ರ ಸರಕಾರವು 5ನೆ ಆರ್ಥಿಕ ಆಯೋಗದ ವರದಿಯನ್ನು ಒಪ್ಪಿರುವುದರಿಂದ ರಾಜ್ಯ ಸರಕಾರಗಳೂ ಯೂರ್ಯ ದೇಶಗಳೂ ಕೇಂದ್ರದ ಉತ್ಪತ್ತಿಯಲ್ಲಿ ಸ್ವಲ್ಪ ಪಡೆಯಲಿವೆ

★

ರೈಲು ಹರಿದು ಸಾವು

ಮಧುರೈ— ಪಸುನುಲೈ ಮತ್ತು ತಿರುಪರಕುಂದ್ರಂ ಮಧ್ಯೆ ರೈಲು ರಸ್ತೆ ಹಾಯುತ್ತಿದ್ದ ಒಬ್ಬ ಮಹಿಳೆ ಮತ್ತು ಇಬ್ಬರು ಮಕ್ಕಳ ಮೇಲೆ ತಿರುನಾಂಕೂರ್ ಎಕ್ಸ್‌ಪ್ರೆಸ್ ರೈಲು ಹರಿದು ಸತ್ತರು.

★

ಸಿಮೆಂಟ್

ನವದೆಹಲಿ— ಸಿಮೆಂಟು ಮೇಲಿನ ಬೆಲೆ, ಹಂಚಿಕೆ ಮುಂತಾದ ಎಲ್ಲ ಹತೋಟಿಯು ಜನವರಿಯಿಂದ ತೆಗೆದುಹಾಕಲಾಗುವುದೆಂದ ಲೋಕಸಭೆಯಲ್ಲಿ ತಿಳಿಸಲಾಯ್ತು

○

ಕಟಕ್ ಬಂದ್

ಭುವನೇಶ್ವರ— ರಾಜ್ಯದ ಅನೇಕ ಕಡೆ ನಡೆದ ಪೋಲೀಸು ದಬ್ಬಾಳಿಕೆ ಪ್ರತಿಭಟಿಸಿ ನಿನ್ನೆ ಏರ್ಪಡಿಸಿದ್ದ ಕಟಕ್ ಬಂದ್ ಯಶಸ್ವಿಯಾಗಿ ಶಾಂತತೆಯಿಂದ ನಡೆಯಿತೆಂದು ವರದಿಯಾಗಿದೆ.

○

ಮುಖ್ಯಮಂತ್ರಿಗಳ ಸಹಾನುಭೂತಿ

ಬೆಂಗಳೂರು— ಚಾಮರಾಜ ತಾಲ್ಲೂಕಿನ ವಿದ್ಯುಚ್ಛಕ್ತಿ ಪಂಪ್‌ಸೆಟ್ ಉಪಯೋಗಿಸುವ ರೈತರ ನಿಯೋಗವು ಮುಖ್ಯ ಮಂತ್ರಿಗಳವರಲ್ಲಿ ತಮ್ಮ ಕಷ್ಟ ವಿವರಿಸಿದರು ; ಮುಖ್ಯಮಂತ್ರಿಗಳು ಸಹಾನುಭೂತಿ ವ್ಯಕ್ತ ಪಡಿಸಿ ಸರಕಾರ ಅವರಿಗೆ ಪರಿಹಾರ ನೀಡಲು ಯೋಚಿಸುವದಾಗಿ ತಿಳಿಸಿದರು.

●

ರಾಜಕುಮಾರನ ತ್ಯಾಗ

ಲಂಡ್ನ— ತನ್ನ 21 ನೇ ಜನ್ಮದಿನೋತ್ಸವದ ಪಾರಿತೋಷಕವಾಗಿ ಚಾರ್ಲ್ಸ್ ರಾಜಕುಮಾರನು ತನ್ನ ಕಾರನ್ವಾಲ್ ಡ್ಯೂಕ್ ಆಸ್ತಿಯಲ್ಲಿನ ವಾರ್ಷಿಕ ಉತ್ಪತ್ತಿಯಲ್ಲಿ ಅರ್ಧವನ್ನು ಅಂದರೆ 110000 ಪೌಂಡುಗಳನ್ನು ಪ್ರಜೆಗಳಿಗಾಗಿ ಬಿಟ್ಟು ಕೊಡಲು ನಿರ್ಧರಿಸಿರುವರು – ಬ್ರಿಟಿಷ್ ಸರಕಾಸ ಇದನ್ನು ಸ್ವೀಕರಿಸಿದೆ.

★

ರೂ 8 ಲಕ್ಷ ದುರುಪಯೋಗ

ಕಾರವಾರ— ಸಿರ್ಸಿ ಮುನಿಸಿಪಾಲಿಟಿ ಹಣದಲ್ಲಿ ರೂ 8 ಲಕ್ಷ ದುರುಪಯೋಗವಾಗಿದೆಯೆಂದು ಆಪಾದಿಸಲಾಗಿದೆ .. ಸಂಬಂಧಪಟ್ಟವರ ಮೇಲೆ ಸರಕಾರ ಕಾರ್ಯಕ್ರಮ ನಡೆಸಲು ಪಿಎಪ್ಪಿ ಚಳವಳಿ ಹೂಡಲು ನಿರ್ಧರಿಸಿದೆ – ಮುನಿಸಿಪಾಲಿಟಿಯ ಮುಂದೆ ಸತ್ಯಾಗ್ರಹ, ಧರಣ, ಉಪವಾಸ ನಡೆಸಲು ನಿರ್ಧರಿಸಲಾಗಿದೆ.

★

ಹರಿಜನ ಉಪರಾಷ್ಟ್ರಾಧ್ಯಕ್ಷರು

ನವದೆಹಲಿ— ಗಾಂಧಿ ಶತಮಾನೋತ್ಸವ ಸಂದರ್ಭದಲ್ಲಿ ಹರಿಜನರೊಬ್ಬರು ಉಪರಾಷ್ಟ್ರಾಧ್ಯಕ್ಷರಾಗಲು ಅವಕಾಶ ಕೊಡಿ ಶ್ರೀ ಪಠಕ್‌ರ ಉಮೇದುವಾರಿಕೆ ವಾಪಸ್ಸು ಮಾಡಿಸಿ ಶ್ರೀ ಶಿವಷಣ್ಮುಖಂಗೆ ಬೆಂಬಲ ಕೊಡಬೇಕೆಂದು ಪಾರ್ಲಿಮೆಂಟಿನ 13 ಮಂದಿ ಬುಡಕಟ್ಟು ಜನಾಂಗ ಸದಸ್ಯರು ವಿನಂತಿಸಿದರು.

★

ಶಾಸನ ಸಭೆಯಲ್ಲಿ ಭಾರಿ ಗಲಾಟೆ

ಲಕ್ನೊ – ಉತ್ತರ ಪ್ರದೇಶ ಶಾಸನ ಸಭೆಯಲ್ಲಿ ಗ್ರಾಂಟುಗಳ ಬಗ್ಗೆ ವೋಟು ಗಿನಲ್ಲಿ ಆದ ವ್ಯಾಜ್ಯದಿಂದ ಭೀಕರ ಗಲಾಟೆಯಾಗಿ ಪೋಲೀಸರು ಎಲ್ಲ ವಿರೋಧ ಸದಸ್ಯರನ್ನೂ ಬಲಾತ್ಕಾರವಾಗಿ ಹೊರತಂದ ನಂತರ 26 ವಿರೋಧ್ಪಸದಸ್ಯರು ಸಸ್ಪೆಂಡು ಮಾಡಲ್ಪಟ್ಟರು – ಸ್ಪೀಕರರ ಆಜ್ಞೆಯನ್ನ ಉಲ್ಲಂಘಿಸಿ ಡೆಪ್ಯೂಟಿ ಸ್ಪೀಕರರು ತಮ್ಮ ಸ್ಥಾನದಲ್ಲಿ ಎದ್ದು ನಿಂತು, ಪೋಲೀಸರಿಗೆ ಸಭೆಯಿಂದ ಹೊರಗೆ ಹೋಗಲು ತಿಳಿಸಿದರಾದರೂ ಭವನದ ಮಾರ್ಷಲ್ಲೂ ಈ ನಿಜ್ಞೆಯನ್ನು ನಿರಾಕರಿಸಿದರು – ಸ್ಪೀಕರರ ಕಡೆಗೆ ಜೋಡೂ ಪುಸ್ತಕಗಳೂ ಎಸೆಯಲ್ಪಟ್ಟವು ; ಅವರ ಸುತ್ತ ಪೋಲೀಸರೂ ಹೋಂ ಗಾರ್ಡುಗಳೂ ಕಾವಲಿದ್ದರು.

★

ಮುಷ್ಕರ ನಿಂತಿತು

ಬೆಂಗಳೂರು— ಕೈಗಾರಿಕಾ ಮಂತ್ರಿ, ಶ್ರೀ ರಾಜಶೇಖರ ಮೂರ್ತಿಗಳು, ಕೇಳಿಕೆಗಳನ್ನು ಸಹಾನುಭೂತಿಯಿಂದ ಪರ್ಯಾಲೋಚಿಸಲಾಗುವುದೆಂದು ಕೊಟ್ಟ ಭರವಸೆ ಮೇಲೆ ರಾಜ್ಯದ ಹೌಸ್‌ಸರ್ಜನ್ಸರ ಮುಷ್ಕರ ನಿಂತಿತು.

★

ದಿವ್ಯವಾಣಿ

ದೊಡ್ಡ ರಾಷ್ಟ್ರವಾಗಲು ಬಯಸುವ ಜನತೆಗೆ ಸಾಮೂಹಿಕ ಶಿಸ್ತು ಅವಶ್ಯಕವಾದ ಒಂದು ನಿಬಂಧನೆ. — ಗಾಂಧೀಜಿ

6 ತಿಂಗಳ ಮಗು ಪ್ರವೀಣ ಈಜುಗಾರ

ಕಲೋನ್ (ಜರ್ಮನಿ)— ಫೆಡರಲ್ ರಿಪಬ್ಲಿಕ್ ಜರ್ಮನಿಯ ಕಲೋನಿನಲ್ಲಿನ ಸ್ಪೋರ್ಟ್ಸ್ ಅಕಾಡಮಿಯ ಆಶ್ರಯದಲ್ಲಿ 7 ವಾರಗಳಿಂದ 12 ತಿಂಗಳೊಳಗಿರುವ ಪುಟಗೂಸುಗಳ ಈಜುವ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಅದರಲ್ಲಿ ಕೇವಲ 6 ತಿಂಗಳಿನ ಆಂಡ್ರೆ ಆಂಚ್ ಎಂಬ ಚಿಕ್ಕಮಗುವು 8 ನಿಮಿಷ ಮತ್ತು 45 ಸೆಕೆಂಡು ಗಳ ಸ್ಪರ್ಧೆಯಲ್ಲಿ ಈಜುತ್ತ ಸ್ಪರ್ಧಾಜಗತ್ತಿನಲ್ಲಿಯೇ ವಿಶಾಲವಾದ ಪ್ರವೀಣ ಈಜುಗಾರ ಳೆನ್ನಿಸಿಕ್ಕೊಂಡಿದೆ. ಈ ರೀತಿಯಾದ ಚಿಕ್ಕಮಕ್ಕಳಿಗೆ ಸ್ವಾಭಾವಿಕವಾಗಿ ಈಜುವ ಸ್ವಭಾವವಿರುವುದರಿಂದ ಅವನ್ನು ಹೋಗಗೊಡದೆ ವೃದ್ಧಿ ಮಾಡಲು ಚಿಕ್ಕಮಕ್ಕಳಿಂದಲೂ ಈಜಲು ಮಕ್ಕಳನ್ನು ನೀರಿನಲ್ಲಿ ಸ್ವಲ್ಪ ಕಾಲ ಬಿಟ್ಟು ಅವು ಅಭ್ಯಾಸವನ್ನು ಮರೆಯದಂತೆ ನೋಡಿಕೊಳ್ಳಬೇಕೆಂದು ನವನಾಗರಿಕ ತಂದೆತಾಯಂದಿರಿಗೆ ಸಲಹೆಯನ್ನು ಇತ್ತಿದ್ದಾರೆ. (ಯು ಪಿ ಎಸ್)

★

ಮನನಾರ್ಹ ವಿಷಯಗಳು

ಎಷ್ಟೋ ಸಂದರ್ಭಗಳಲ್ಲಿ ಮೃತ್ಯುವು ಲೋಕಸುಖ ದಾನರೂಪವಾದ ಉಪಕಾರದ ವೇಷವನ್ನು ಹಾಕಿಕೊಂಡುಬರುವದಾಗಿದೆ.

ದೇವರ ಕ್ರಿಯೆಗಳಲ್ಲಿ ಪಕ್ಷಪಾತವಿಲ್ಲದಿದ್ದರೂ ಮನುಷ್ಯನ ಕ್ರಿಯೆಗಳಲ್ಲಿ ಕಂಡು ಬರುವ ಪಕ್ಷಪಾತವು ದೇವರ ಉದ್ದೇಶಕ್ಕೆ ವಿರೋಧವಾಗಿದೆ.

ಅಪಾರ ಹಾನಿಗೆ ಕಾರಣವಾಗಿರುವ ಸ್ವಭಾವವು ಮನುಷ್ಯನಲ್ಲಿರುವುದರಿಂದ ಅವನು ಬಾಲ್ಯಾವಸ್ಥೆಯಲ್ಲಿಯೋ ನಿದ್ರಾವಸ್ಥೆಯಲ್ಲಿಯೋ ಇದ್ದಾನೆಂದು ಭಾವಿಸಬೇಕಾಗಿದೆ.

ಸ್ವಕೀಯ ಪರಕೀಯವೆಂಬ ಭೇದವನ್ನೇನೂ ಗಣಿಸದೆ ಭೋಗ್ಯವಸ್ತುಗಳಲ್ಲಿ ಹಕ್ಕು ಸಂಪಾದಿಸಿಕೊಳ್ಳುವುದಕ್ಕೆ ಯತ್ನಿಸುತ್ತಿರುವುದು ಮನಸ್ಸಿನ ಸ್ವಭಾವವಾಗಿದೆ.

ಲೋಕದಲ್ಲಿ ಸ್ವಭಾವಸಿದ್ಧವಾಗಿ ಒಳ್ಳೆಯವರೂ ಕೆಟ್ಟವರೂ ಎಂಬ ಎರಡು ಬಗೆಯು ಕಾಣಿಸುತ್ತಿದ್ದಾರೆ; ಒಳ್ಳೆಯವನಲ್ಲಿ ಒಳ್ಳೆಯದೂ, ಕೆಟ್ಟವನಲ್ಲಿ ಕೆಟ್ಟದೂ ಸುಲಭವಾಗಿ ನಿರವೇರುತ್ತವೆ.

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H H. the Maharaja Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah Sri Madhav Shenoi Sri Opera Talkies, Padmabhushana Dr. M.C. Modi, Dr. R S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

ಜಯಪ್ರದ 5 ನೇ ವಾರ

ವುಡ್‌ಲ್ಯಾಂಡ್ ಶೀನ

— ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಇಂತಕಾಮ್ INTAQAM

ಪಾತ್ರ– ಸಂಜಯ್, ಸಾಧನ, ರಾಜೇಂದ್ರನಾಥ್, ಹೆಲೆನ್

ರಹೆಮಾನ್, ಅಶೋಕುಮಾರ್

ಸಂಗೀತ : ಲಕ್ಷ್ಮೀಕಾಂತ್ – ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಅಪೆರಾ— ಅಮೋಘ 2 ನೇ ವಾರ

ಅಮೋಘ ಆಕರ್ಷಣೀಯ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್

ಸಪ್‌ನೋನ್ ಕ ಸೌದಾಗರ್

ನಟವರ್ಗ— ರಾಜಕಪೂರ್, ಹೇಮಮಾಲಿನಿ

ಸಂಗೀತ : ಶಂಕರ್ ಜೈಕಿಷನ್

ದಿನ 3 ಆಟಗಳು.

Quality Printing — Neat Binding

Lakshminarasimha Press

Sivarampet, Mysore

Help The Gorakshana

ಗೋರಕ್ಷಣೆ ಮುಖ್ಯ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣೆಗೆ ಚಿಂತಲ ನೀಡಿ

Protect the Cow

SHAKTI SUDHA

A Superb Tonic

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4